ಈ ಲೇಖನದಲ್ಲಿ ಬರುವ ಎಲ್ಲ ಪಾತ್ರಗಳೂ ಕಾಲ್ಪನಿಕ, ಯಾವುದೇ ಹೋಲಿಕೆ ಕಂಡುಬಂದಲ್ಲಿ ಅದು ಕೇವಲ ಆಕಸ್ಮಿಕ.

## ಅವಳೆಲ್ಲಿ ಹೋಗ್ತಾಳೆ?

ಮನೆಗೆ ಬಂದು ಬಾಗಿಲು ತೆಗೆದು, ಕೈಕಾಲು ಮುಖ ತೊಳೆದು ಸೀದಾ ಅವಳ ಪಾಕಶಾಲೆಗೆ ಕಾಲಿಟ್ಟೆ, ಅವಳಾ ಮಲಗಿರ್ತಾಳಲ್ಲ ಎಲ್ಲಿ ಹೋಗ್ತಾಳೆ, ಆದರೆ ಪಾಕಶಾಲೆಯಲ್ಲೇನಿದೆ, ಏನಿದೆ ಅಲ್ಲಿ.. ಏನಿಲ್ಲ! ಅದೇ ಟೀ ಕುಡಿದು ಖಾಲಿ ಮಾಡಿಟ್ಟ ಕಪ್ಪು, ಅದನ್ನು ಮಾಡಿದ ಬೋಗುಣಿ, ಸೋಸಿದ ಜಾಳಗಿ(ಜಾಲರಿ) ಮಾತ್ರ. ಪ್ರತೀ ದಿನ ಬಂದಾಗ ಅಲ್ಲಿರುತ್ತಿದ್ದ ನೀಟಾಗಿ ಊಟ ಬಡಿಸಿಟ್ಟ ತಟ್ಟೆ ಎಲ್ಲಿ?... ಏನಾಯ್ತು ಅವಳಿಗೆ, ಅಡಿಗೆ ಮಾಡಿಲ್ವೇ ಇಂದು, ಹುಷಾರಿಲ್ವೇ, ಮರೆತು ಹೋದಳೇ. ಅಯ್ಯೊ ಎಲ್ಲ ನಾನೇ ಯೋಚಿಸ್ತಿದೀನಲ್ಲ, ಇಲ್ಲೇ ಮಲಗಿರ್ತಾಳೆ ಎಲ್ಲಿ ಹೋಗ್ತಾಳೆ, ಎಬ್ಬಿಸಿ ಕೇಳೋಣ ಅಂತ ಬೆಡರೂಮಿಗೆ ಬಂದೆ, ಅಲ್ಲೇನಿದೆ, ಏನಿಲ್ಲ... ಅಲ್ಲೂ ಏನಿಲ್ಲ... ಎಲ್ಲಿ ಅವಳು? ಹಾಲ್, ಹಿತ್ತಿಲು, ವರಾಂಡ, ಕೊನೆಗೆ ಬಾತರೂಮ್ ಟಾಯ್ಲೆಟ್ ಎಲ್ಲ ಕಡೇ ಹುಡುಕಾಡಿಯಾಯ್ತು ಎಲ್ಲಿ ಅವಳು, ಎಲ್ಲೂ ಇಲ್ಲ. ಎಲ್ಲಿ ಹೋದ್ಲು ಅದೂ ಇಷ್ಟೊತ್ತಿನಲ್ಲಿ ಅದೂ ನನಗೇನೂ ಹೇಳದೇ ಎಲ್ಲೂ ಹೋಗಲ್ಲ, ಹೋದರೂ ಇಷ್ಟೊತ್ತು ಲೇಟಾದರೂ ಫೋನು ಮಾಡಿ ಇಲ್ಲಿದೀನಿ ಬರ್ತೀನಿ ಅಂತಾದರೂ ಹೇಳೊಳು, ಇಂದೇನು ಇಲ್ಲ, ಇಲ್ಲೆ ಪಕ್ಕದ ಮನೆಗೆ ಹೋಗೀದಾಳ, ಪಕ್ಕದ ಮನೆ ಪದ್ದು ಹತ್ರ ಬಿಟ್ರೆ ಎಲ್ಲೂ ಹೋಗಲ್ಲ, ಅದೊ ಅವರ ಮನೇಲಿ ಒಂದು ಲೈಟೂ ಉರೀತಿಲ್ಲ, ಕಿಟಕೀಲಿ ಕಾಣಿಸ್ತಿದೆ, ಎಲ್ಲ ಮಲಗೀದಾರೆ, ಎಲ್ಲಿ ಹೋದಳು. ಹಾಗೇ ಸೊಫಾದ ಮೇಲೆ ಕುಸಿದ ಕುಳಿತರೆ, ಅವಳ ಮೊಬೈಲ ಕೆಳಗಿತ್ತು ಪುಟಿದೆದ್ದೆ, ಅದನ್ನು ತೆಗೆದು ಪಕ್ಕಕ್ಕಿಟ್ಟೆ, ಮೊಬೈಲೂ ಇಲ್ಲೇ ಇದೆ ಎಲ್ಲಿ ಹೋದ್ಲು. ನಿಧಾನ ಬೆವರ ತೊಡಗಿದೆ.... ಹೊರಗೆ ಜಿಟಿ ಜಿಟಿ ಮಳೆಯಾಗುತ್ತಿದ್ದರೂ...

ಈ ವಾರವೆಲ್ಲ ಬಹಳೇ ಬಹಳ ಕೆಲಸದಲ್ಲಿ ನಿರತನಾಗಿದ್ದೆ, ಅವಳೊಂದಿಗೆ ಸರಿಯಾಗಿ ಮಾತನಾಡಲೂ ಆಗಿರಲಿಲ್ಲ, ಮುಂಜಾನೆ ಟಿಫಿನ್ನು ಮಾಡುತ್ತ ಡೈನಿಂಗ ಟೇಬಲ್ಲಿನ ಮೇಲೂ ಅದೇ ಆಫೀಸು, ಕೆಲ್ಸ, ಬಹಳ ಟೆನ್ಷನ್ ಇತ್ತು, ಸಂಜೆ... ಅಲ್ಲಲ್ಲ ಅದು ರಾತ್ರಿ, ಬರೋದು ಕೂಡ ಲೇಟಾಗುತ್ತಿತ್ತು, ಹೀಗೇ ಈವತ್ತೂ ಲೇಟಾಗಿದ್ದುದು, ಎಲ್ಲಿ ಹೋಗ್ತಾಳೆ ಮನೇಲೇ ಇರ್ತಾಳೆ ಅಂತನಕೊಂಡಿದ್ದು ಸುಳ್ಳಾಗಿತ್ತು, ನಾನೆಲ್ಲಿ ಮಾತಾಡಿಲ್ಲ ಅಂತ ಬೇಜಾರಾಗಿ ಹೊರಟು ತವರಿಗೆ ಹೋದಳಾ, ಫೋನು ಮಾಡಿ ಕೇಳೋಣ ಅಂತ ಫೋನು ಕೈಗೆತ್ತಿಕೊಂಡೆ, ಏನಂತ ಕೇಳಲಿ? ಅವಳಲ್ಲಿ ಬಂದೀದಾಳ ಅಂತಾನಾ? ಅಲ್ಲಿರದಿದ್ದರೆ, ಮರುಪ್ರಶ್ನೆ ಗ್ಯಾರಂಟಿ ಎಲ್ಲಿ ಹೋಗಿದಾಳೆ ನಿಮಗೆ ಹೇಳದೇ? ಅಂತ, ಏನಂತ ಹೇಳಲಿ ಆಗ, ಮೊದಲೇ ನನಗೆ ಗೊತ್ತಿಲ್ಲ ಇನ್ನು ಅವರೂ ಟೆನ್ಷನ್ ಮಾಡ್ಕೋತಾರೆ, ಅವಳಿಗೇನಾಗಿರಲ್ಲ ಇಲ್ಲೇ ಎಲ್ಲೊ ಹೋಗಿರ್ತಾಳೆ, ಬರ್ತಾಳೆ, ಸುಮ್ನೇ ನಾನೇ ಬಹಳ ಯೋಚಿಸ್ತಿದೀನಿ, ಅಂತ ಸಮಾಧಾನಿಸಿಕೊಂಡೆ, ಆದರೂ ತಲೇಲಿ ಪ್ರಶ್ನೆ ಕೊರೆಯುತ್ತಿತ್ತು ಹುಳುಕೊರೆದಂತೆ. ಅಮ್ಮನಿಗೆ ಫೋನು ಮಾಡಿದರೆ? ಅಯ್ಯೊ ಹಾಗೇನಾದ್ರೂ ಮಾಡಿದ್ರೆ ಚೆನ್ನಾಗಿ ಬೈಸಿಕೋತೀನಿ, ಪಾಪ ಒಬ್ಬೆ ಮನೇಲಿ ಇರ್ತಾಳೆ, ಹುಷಾರಾಗಿ ನೋಡ್ಕೊ ಅಂತ ಮೊದಲೇ ಅಮ್ಮ ಎಚ್ಚರಿಕೆ ಕೊಟ್ಟಿದ್ದು ನೆನಪಿಗೆ ಬಂತು,

**ಮೊದಲೇ ಬೆಂಗಳೂರು ಮಹಾನಗರ ಬೆಳೆದಂತೆ ಅಪರಾಧ ದುಷ್ಕೃತ್ಯಗಳು ಜಾಸ್ತಿ ಆಗ್ತಿವೆ, ಯಾರಾದರೂ ಅಪಹರಿಸಿದರೋ?**

ಏನಿದು ಏನೇನೊ ಯೊಚಿಸ್ತಿದೀನಿ, ಹಾಗೇನು ಆಗಿರಲ್ಲ ಅಂತ ಮನಸಂದರೂ ಯೋಚನೆಗಳು ಬಿಡಬೇಕಲ್ಲ, ಒಂದು ತಿಳಿ ಅಂದ್ರೆ ಹತ್ತು ತಿಳಿಯುತ್ತಿತ್ತು, ಯಾರಾದರೂ ಅಪಹರಿಸಿದ್ರೆ ಫೋನು ಮಾಡಿ ಇಷ್ಟೊತ್ತಿಗೆ ದುಡ್ಡು ಕೇಳಿರೊರು, ನಾನೇ ಬಂದು ಅರ್ಧ ಘಂಟೆ ಆಯ್ತು, ಅದೂ ಇಲ್ಲ, ಮತ್ತೆ ಇನ್ನೂ ಎನೊ ಭಾರಿ ಅನಾಹುತ ಛೇ ಹಾಗಾಗಿರಲ್ಲ, ಬಿಟ್ಟು ಅನ್ನು, ಎಲ್ಲ ಒಳಿತಾಗಲಿ, ಯಾರನ್ನ ಕೇಳಲಿ ಈಗ ಅಂತ ಶತಪಥ ಅತ್ತಿಂದಿತ್ತ ತಿರುಗಿದೆ, ಕೂತರೆ ಕೈಬೆರೆಳು ಹಾಗೇ ಟೀಪಾಯಿ ಬಾರಿಸುತ್ತಿದ್ದವು, ಕೋಡಿಂಗ ಮಾಡುವಾಗ ಕಂಪ್ಯೂಟರ್ ಕೀಬೋರ್ಡ ಮೇಲೂ ಅಷ್ಟು ಜೋರಾಗಿ ಓಡಾಡಿರಲಿಕ್ಕಿಲ್ಲ, ಕೊನೇಪಕ್ಷ ಪಕ್ಕದಮನೇಲಿ ಹೇಳಿ ಹೋಗಿರ್ತಾಳೆ ಅವರನ್ನೇ ಕೇಳಿದ್ರೆ, ಪದ್ದು ನೆನಪಿಗೆ ಬಂದ್ಲು, ಮಲಗೀದಾರೆ ಅನಿಸತ್ತೆ, ಎಬ್ಬಿಸಿದರಾಯ್ತು, ಏನಂತ "ಪದ್ದು" ಅಂತಾನಾ, ಹಾಗೆ ಹೇಗೆ ಕರೆಯೋಕೆ ಆಗತ್ತೆ, ಹಾಗಾದ್ರೆ ನಿಜ ಹೆಸರೇನು, ಪದ್ಮಾ, ಪದ್ಮಾವತಿ, ಪದ್ಮಲತಾ... ಏನೂ ನೆನಪಿಗೆ ಬರ್ತಾ ಇಲ್ವೇ... ಪದ್ಮಪ್ರಿಯ.. ಅದು ಉಡುಪಿ ಎಂಎಲ್ಎ ಹೆಂಡತಿ ಹೆಸರಲ್ವೇ, ಅದೇ ದೆಹಲಿಯಲ್ಲಿ ಅವಳ ಶವ ದೊರಕಿತಲ್ಲ ಆ ಪದ್ಮಪ್ರಿಯ.. ಹಾಗೆ ನನ್ನಾಕೆಯೂ ನನ್ನ ಬಿಟ್ಟು.. ಛೀ ನನ್ನ ಯೋಚನೆಗಳಿಗಿಷ್ಟು... ಹಾಗೆಲ್ಲ ಏನಿಲ್ಲ, ಮನಸು ಇನ್ನೂ ಬಿಡ್ತಿಲ್ಲ, ಹೌದು ಮನೆಗೆ ಬರೋದೆ ಲೇಟು ಅವಳೊಂದಿಗೆ ಸರಿಯಾಗಿ ಮಾತಾಡೂ ಇಲ್ಲ, ಅದಕ್ಕೆ ಬೇಜಾರಾಗಿ ನನ್ನ ಬಿಟ್ಟು ಓಡಿಹೋಗಿದ್ರೆ, ಅಂತ ಇನ್ನೂ ಬಡಕೊಳ್ಳುತ್ತಿತ್ತು.

ಅಷ್ಟರಲ್ಲೇ ಪದ್ದು ಹೆಸರು ಜ್ಞಾಪಕಕ್ಕೆ ಬಂತು, ಪದ್ಮಿನಿ ಅಲ್ವಾ, ಅದು ಈಗ ಬೇಡವಾಗಿತ್ತು, ಅವಳು ಮನೆ ಬಿಟ್ಟು ಹೋಗುವಾಗ ಲೇಟರು ಗಿಟರು ಏನಾದ್ರೂ ಬರೆದಿಟ್ಟು ಹೋಗೀದಾಳೊ ಅಂತ ಹುಡುಕುತ್ತಿದ್ದೆ, ಡ್ರಾವರು, ಅವಳ ಡ್ರೆಸಿಂಗ್, ಟೇಬಲ್ಲು, ಟೀವಿ, ಫ್ರಿಡ್ಜು, ಕೊನೆಗೆ ತಲೆದಿಂಬು ಕೆಳಗೂ ನೋಡಿದ್ದಾಯ್ತು.. ಉಹೂಂ ಅಲ್ಲೂ ಇಲ್ಲ. ಎಲ್ಲಿ ಎಲ್ಲಿ ಅಂತ ಬೆಡಶೀಟು, ಹಾಸಿಗೆ, ಹೊದಿಕೆ ಎಲ್ಲ ಕಿತ್ತು ಬೀಸಾಡಿದ್ದಾಯ್ತು. ಮತ್ತೆ ಹೊರಗೆ ಬಂದು ಕೂತು, ಯಾರಿಗೆ ಕೇಳಲಿ ಅಂತ ಯೋಚಿಸುತ್ತ ಅಕ್ಕ ಮಾಮನಿಗೆ ಫೋನು ಮಾಡತೊಡಗಿದೆ, ಬೆಂಗಳೂರಿನಲ್ಲಿ ಈಗ ನಾ ಇಂಥ ಪರಿಸ್ಥಿತಿಯಲ್ಲಿ ಫೋನು ಮಾಡಬಹುದಾಗಿದ್ದರೆ ಅವರಿಗೆ ಮಾತ್ರ, ಅತ್ತಲಿಂದ ಅಕ್ಕ ಲೇಟಾಗಿ ಬರೊ ನನ್ನ ಬಯ್ದಳು, ಮಾಮ ಪೋಲೀಸು ಕಂಪ್ಲೇಂಟ ಏನಾದ್ರೂ ಕೊಡೋದೊ ಹೇಗೆ ಅಂತಂದು, ಏನಕ್ಕೂ ನಾವು ಬರೊವರೆಗೆ ತಾಳು, ಮೊದಲು ಎಲ್ಲರಿಗೂ ಫೋನು ಮಾಡಿ ಕೇಳಿದರಾಯ್ತು ಅಂತ ಫೋನಿಟ್ಟರು.

ಸ್ವಲ್ಪ ಧೈರ್ಯ ಬಂತು, ತಲೆಗೂದಲಲ್ಲಿ ಕೈ ಹುದುಗಿಸಿಟ್ಟುಕೊಂಡು ಹಾಗೆ ಬಾಗಿ ಕೂತಿದ್ದೆ, "ಕೀರರರರ..." ಅಂತ ಶಬ್ದದೊಂದಿಗೆ ಬಾಗಿಲು ತೆರೆದುಕೊಂಡಿತು, ಕೈತುಂಬ ರಾಶಿ ಹೊರೆಬಟ್ಟೆ ತೆಗೆದುಕೊಂಡು, ಒಳಗೆ ಬಂದವಳೇ ಬಾಗಿಲು ಹಾಕಿದಳು, ಹೋದ ಜೀವ ಬಂದಂತಾಯಿತು, ಓಡಿಹೋಗಿ ಗಟ್ಟಿಯಾಗಿ ತಬ್ಬಿಕೊಂಡೆ, ಉಸಿರುಗಟ್ಟುವಷ್ಟು ಗಟ್ಟಿಯಾಗಿ, "ರೀ ಏನಾಯ್ತು?" ಅಂತ ಅವಳು ಕೇಳುತ್ತಲೇ ಇದ್ಲು, ನಾನೇನು ಹೇಳುತ್ತಿಲ್ಲ, ಬೆನ್ನಿಗೆ ನಾಲ್ಕು ಗುದ್ದು ಕೊಟ್ಟೆ, ಅವಳ ಮುಖವನ್ನೊಮ್ಮೆ ನೋಡಿ ಮತ್ತೆ ಅಪ್ಪಿಕೊಂಡೆ, ಕೈಲಿದ್ದ ಬಟ್ಟೆ ಚೆಲ್ಲಿ, ತಲೆ ಸವರಿದಳು, ನನ್ನ ಪಾದದಮೇಲೆ ಹತ್ತಿ ನಿಂತು ಹಿಮ್ಮಡಿ ಎತ್ತರಿಸಿ ಹಣೆಗೆ ಮುತ್ತನ್ನಿಟ್ಟಳು. ಆಗಲೇ ನಾ ಮತ್ತೆ ಪ್ರಜ್ಞೆಗೆ ಬಂದಿದ್ದು.

ಮೊದಲು ಮೊಬೈಲು ತೆಗೆದುಕೊಂಡು, ಮಾಮನಿಗೆ ಫೋನು ಮಾಡಿ ಅವಳೆಲ್ಲಿ ಹೋಗಿಲ್ಲ, ಇಲ್ಲೇ ಇದಾಳೆ ಉಳಿದದ್ದು ನಾಳೆ ಹೇಳ್ತೀನಿ, ನಾನೆ ಸುಮ್ನೆ ಹೆದರಿದ್ದೆ ಅಂದೆ, ಅಕ್ಕ "ಹುಚ್ಚಾ, ನಮಗೂ ಹುಚ್ಚು ಹಿಡಿಸಿಬಿಡ್ತೀಯಾ.." ಅಂತ ಬಯ್ದಳು ನಗುತ್ತ... ಅಷ್ಟರಲ್ಲಿ ಬಿದ್ದ ಬಟ್ಟೆಗಳನ್ನೆಲ್ಲ ಎತ್ತಿ ಅವಳು ಇಡಲು ಬೆಡರೂಮಿಗೆ ಹೋಗಿದ್ದಳು ಅಲ್ಲಿನ ಸ್ಥಿತಿ ನೋಡಿ ಹೊರಗೆ ಬಂದು, "ಏನ್ರೀ ಆಯ್ತು, ಹಾಸಿಗೆ ಎಲ್ಲ ಯಾಕೆ ಹಾಗೆ ಚೆಲ್ಲಾಪಿಲ್ಲಿಯಾಗಿದೆ, ಮೊದ್ಲು ಏನಾಯ್ತು ಹೇಳಿ ನನಗೆ" ಅಂತ ಬಟ್ಟೆ ಅಲ್ಲೇ ಬೀಸಾಡಿ ಬಂದ್ಲು, ಅವಳ ಕೈ ಹಿಡಿದುಕೊಂಡು ಸೊಫಾದಲ್ಲಿ ಕುಳಿತೆ, "ನನ್ನೆಂದಾದರೂ ಬಿಟ್ಟು ಹೋಗ್ತೀಯ" ಅಂದೆ "ಹಾಂ!!! ಯಾಕೆ ಬೇರೆ ಯಾರದ್ರೂ ಹುಡುಗಿ ಇಷ್ಟವಾಗಿ ಬಿಟ್ಲಾ ಹೇಗೆ, ಅವಳ ಮದುವೆ ಆಗಬೇಕಂತ ನಾ ಬಿಟ್ಟು ಹೊಗ್ತೀನಾ ಅಂತ ಕೇಳ್ತಿದೀರಾ?" ಅಂದ್ಲು ಅವಳ ಯಾವತ್ತಿನ ತರಲೇ ಧಾಟಿಯಲ್ಲೇ. ನಾ ಸುಮ್ಮನೆ ನಕ್ಕೆ "ನಾನ್ಯಾಕ್ರಿ ಬಿಟ್ಟು ಹೋಗ್ಲಿ, ಈಗ ಏನಾಯ್ತು ಅಂತ ಹೇಳ್ತೀರೊ ಇಲ್ವೊ, ಇಲ್ಲಂದ್ರೆ ಬಿಟ್ಟು ಹೋಗ್ತೀನಿ ನೋಡಿ" ಅಂತ ಹೆದರಿಸಿದ್ಲು, "ಎಲ್ಲಿದ್ದೆ" ಅಂದೆ, "ಮೇಲೇ ಟೆರೆಸಿನಲ್ಲಿ, ಆ ತಗಡಿನ ಶೀಟು ಹಾಕಿ ನೀರು ಬೀಳದಂತೆ ಮರೆ ಮಾಡಿಲ್ವಾ ಅಲ್ಲಿ ಕೂತಿದ್ದೆ, ಮಳೆ ಬರ್ತಿದೆ ಅಂತ ಒಣಗಿ ಹಾಕಿದ್ದ ಬಟ್ಟೆ ತರಲು ಹೋಗಿದ್ನಾ, ಮಳೆ ಒಮ್ಮೆಲೆ ಜೋರಾಗಿ ಬಿಟ್ತು, ಹಾಗೆ ಕೆಳಗೆ ಬಂದ್ರೆ ಎಲ್ಲ ಬಟ್ಟೆ ಮತ್ತೆ ತೋಯ್ದು ಹೋಗ್ತವೆ, ಸ್ವಲ್ಪ ಮಳೆ ಕಮ್ಮಿ ಆಗಲಿ ಅಂತ ಅಲ್ಲೇ ಕೂತಿದ್ದೆ" ಅಂದ್ಲು. "ಮಳೆ ಇನ್ನೊಂದು ಸ್ವಲ್ಪ ಹೊತ್ತು ಹೀಗೆ ಸುರಿದಿದ್ದರೆ, ಇಲ್ಲಿ ದೊಡ್ಡ ರಾಧ್ಧಾಂತವಾಗಿರೋದು" ಅಂದೆ, ಏನು ಅನ್ನುವಂತೆ ನೋಡಿದ್ಲು, ಆದ ಸಂಗತಿಯನ್ನೆಲ್ಲ ಒಂದೊಂದಾಗಿ ಹೇಳಿದೆ, ಬಿದ್ದು ಬಿದ್ದು ನಕ್ಕಳು. "ನೀನೇನು ನಗ್ತೀಯಾ ನಂಗೇನಾಗಿತ್ತು ನನಗೇ ಗೊತ್ತು" ಅಂದೆ, "ಅಲ್ಲ ಏನೇನು ಯೊಚ್ನೆ ಮಾಡ್ತೀರೀ ನೀವು, ಅಲ್ಲ ನಾನ್ಯಾಕೆ ನಿಮ್ಮನ್ನ ಬಿಟ್ಟು ಹೋಗ್ಲಿ ಹೇಳಿ, ಮದುವೆಗೆ ಮುಂಚೇನೆ, ನಿಮ್ಮ ಈ ಲೇಟಾಗಿ ಬರೋದು, ಟೆನ್ಷನ್ ಕೆಲಸ ಎಲ್ಲ ಹೇಳಿದ್ರಲ್ಲ, ನಂಗೊತ್ತಿತ್ತು,  ಇತ್ತೀಚಿನ ಕೆಲಸದ ಅನಿಶ್ಚಿತತೆ ಬಹಳ ತಲೆನೋವಾಗಿರೊವಾಗ, ನಾನು ಹಾಗ್ಯಾಕೆ ಯೋಚಿಸಲಿ" ಅಂದ್ಲು. ಹಾಗೆ ಅಲ್ಲೇ ಒರಗಿಕೊಂಡೆ, "ನಿಂಗೆ ನೆನಪಿದ್ಯಾ ಮದುವೆಯಾದ ಹೊಸತರಲ್ಲಿ" ಅಂತಿದ್ದಂಗೆ, "ಈಗ ಅದ್ಯಾಕೆ" ಅಂತ ನಾಚಿದಳು, **"ಬೇಗ ಬರ್ತಿದ್ದೆ, ಘಂಟೆಗಟ್ಲೆ ನಿನ್ನೊಂದಿಗೆ ಮಾತು, ಹರಟೆ, ನಗು, ಎಲ್ಲಿ ಹೋಯ್ತು ಅದು"** ಅಂದೆ. "ಆಫೀಸಲ್ಲಿ ಏನೇನು ನೆಪ ಹೇಳ್ತಾ ಇದ್ರಿ, ಅದೇ, ಗ್ಯಾಸ್ ಕನೆಕ್ಷನ್ ಮಾಡಿಸಬೇಕು ಅಂತ ಒಂದು ದಿನ ಆದ್ರೆ, ಇನ್ನೊಂದು ದಿನ ಸಿಲಿಂಡರ ತರೋಕೆ, ಮತ್ತೊಂದಿನ ತಲೆ ನೋವು ಅಂತ ರಜೆ, ಇನ್ನೊಮ್ಮೆ ಯಾರನ್ನೊ ಪಿಕಅಪ್ ಮಾಡ್ಬೇಕಿತ್ತು ಅಂತ ಲೇಟಾಗಿ ಹೋಗೊದು, ಒಂದೆ ಎರಡೇ, ಹೊಸದಾಗಿ ಮದುವೆ ಆಗಿದೆ ಅಂತ ನಿಮ್ಮ ಮ್ಯಾನೇಜರ್ರೂ ತತಾಸ್ಥು ಅನ್ನೊರೊ ನೀವು ಕೇಳೊ ರಜೆಗಳಿಗೆ, ಹೇಳೊದೆಲ್ಲ ನೆಪಗಳು ಅಂತ ಅವರಿಗೂ ಗೊತ್ತಾಗಿರಬೇಕು" ಅಂತ ನಕ್ಕಳು, ನಾನೂ ನಕ್ಕೆ, ಹಾಗೆ ಇಬ್ಬರೂ ಕೂತು ಹರಟೆ ಹೊಡೆದು ಎಷ್ಟೋ ದಿನಗಳಾಗಿತ್ತು.

ಮದುವೆಯಾದ ಹೊಸತರಲ್ಲಿ ಎಲ್ಲ ಹಾಗೆ ಅಲ್ವ, ಅದೇನೊ ವಿಚಿತ್ರ ಸೆಳೆತ ಇರತ್ತೆ, ಪ್ರತೀ ಮಾತಿಗೂ ಪುಳಕಗೊಳ್ಳುತ್ತದೆ ಮನಸು, ಮತ್ತೆ ಮತ್ತೆ ಮಾತಾಡಲು ಹಾತೊರೆಯುವಂತೆ ಮಾಡುತ್ತದೆ, ಆ ಒಂದು ಸಣ್ಣ ಸ್ಪರ್ಷ, ಒಂದಿಷ್ಟು ನೋಟ, ಮತ್ತೊಂದಿಷ್ಟು ನಗು, ಮಧುರ ಅನುಭೂತಿ. ಅದೇ ದಿನಗಳೆದಂತೆ ಜವಾಬ್ದಾರಿ ಹೆಚ್ಚುತ್ತವೆ, ಹೊಸತು ಹಳೆಯದಾಗುತ್ತದೆ,

ನಿತ್ಯ ದಿನಚರಿಗೆ ಹೊಂದಿಕೊಳ್ಳತೊಡಗುತ್ತೇವೆ, ಉದಾಸೀನತೆ ಬಂದು ಬಿಡುತ್ತದೆ, ಅವಳೆಲ್ಲಿ ಹೋಗ್ತಾಳೆ? ಮನೇಲೆ ಇರ್ತಾಳಲ್ಲ ಅಂತ. ಆಫೀಸಿನಲ್ಲಿ ಗೆಳೆಯನೊಂದಿಗೆ ಒಂದಿಷ್ಟು ಹೊತ್ತು ಹರಟೆ ಹೊಡೆದು ಬರುತ್ತೇವೆ ಹೊರತು, ಬೇಗ ಬಂದು ಹೆಂಡತಿಯೊಂದಿಗೆ ನಾಲ್ಕು ಮಾತನಾಡಿದರೆ ಅಂತ ಹೊಳೆಯೋದೇ ಇಲ್ಲ, ಯಾಕೆ?... ಅವಳೆಲ್ಲಿ ಹೋಗ್ತಾಳೆ ಮನೇಲೇ ಇರ್ತಾಳಲ್ಲ. ದಿನಾ ಘಂಟೆ ಕಾದು ಅವಳ ಭೇಟಿಯಾಗುತ್ತಿದ್ದ ಪ್ರೇಮಿಗಳು ಕೂಡ, ಘಂಟೆ ಲೇಟಾಗಿ ಬರುತ್ತಾರೆ ಕಾರಣ ಅವಳೆಲ್ಲಿ ಹೋಗ್ತಾಳೆ?. **ಹೊಸತು ಚಪ್ಪಲಿಯನ್ನು ಹಾಕಿದರೆಲ್ಲಿ ಏನಾದೀತು ಅಂತ ಎತ್ತಿ ಜತನವಾಗಿ ಕಪಾಟಿನಲ್ಲಿ ಇಟ್ಟವರು ಹಳೆಯದಾಗುತ್ತಿದ್ದಂತೆ ಅಲ್ಲೇ ಬೀಸಾಡಿ ಬರತೊಡಗುತ್ತೇವೆ. ಸಂಬಂಧಗಳೂ ಹಾಗೆ...** ಹಳೆಯದಾದಂತೆ ಮತ್ತೆ ಮತ್ತೆ ಹೊಳಪು ಹಾಕಿ ಪಾಲೀಷು ಮಾಡಿದಂತೆ ಮತ್ತೆ ಮತ್ತೆ ಹೊಸದಾಗಿಸುತ್ತ ಬಂದರೆ ಬಾಳಿಕೆ ಬಂದೀತು, ಬಾಳು ಬಂಗಾರವಾದೀತು.

ಮನೆಯಲ್ಲಿ ಅವರೂ ಅಷ್ಟೇ, ಬರೀ ಪ್ರೀತಿಯೊಂದರಿಂದ ಜೀವನ ಸಾಗಲ್ಲ, ಕೆಲ್ಸ ಮಾಡಬೇಕು ದುಡ್ಡು ಗಳಿಸಬೇಕು, ದಿನ ದಿನ ಕೆಲ್ಸ ಜಾಸ್ತಿಯಾಗಿ ಮೊದಲಿನಂತೆ ಇರಲಾಗುವುದಿಲ್ಲ, ದಿನವೂ ಚಕ್ಕರ ಹೊಡೆದರೆ ನಡೆಯಲ್ಲ ಅಂತ ತಿಳಿದುಕೊಳ್ಳಬೇಕು, ಅವಳೆಲ್ಲಿ ಹೋಗ್ತಾಳೆ ಅಂತ ಉದಾಸೀನತೆ ಬರದಂತೆ, ನವೀನತೆ ಕಾಪಾಡಿಕೊಳ್ಳಬೇಕು, ಮನೇ ಮಕ್ಕಳು ಅಯ್ತು ಇನ್ನೇನಿದೆ ಜೀವನ ಅಂತ ನೀರಸವಾಗಬಾರದು. ಪ್ರತೀ ದಿನ ಹೊಸತು, ಪ್ರತೀ ಮಾತು ಹೊಸತು, ಅಂತ ಅದೇ ಚೈತನ್ಯ ಕಾಪಾಡಿಕೊಂಡರೆ ಬದುಕು ಬೊರಾಗಲ್ಲ,(ಬೇಜಾರು).

"ಎಲ್ಲೇ, ನನ್ನ ಊಟದ ತಟ್ಟೆ" ಅಂದೆ, "ದಿನಾ ಬಂದು ಆ ಹಚ್ಚಿಟ್ಟ ತಟ್ಟೆ ಊಟ ತಿಂದು ಮಲಗಿ ಬಿಡ್ತೀರಾ ಒಂದು ಮಾತಿಲ್ಲ ಕತೆಯಿಲ್ಲ, ಅದಕ್ಕೆ ಈವತ್ತು ನಾನೇ ಬಡಿಸೋಣ ಅಂತ ಹಚ್ಚಿಟ್ಟಿಲ್ಲ" ಅಂದ್ಲು. "ಒಳ್ಳೆ ಐಡಿಯಾ" ಅಂದೆ. "ಹೂಂ ಸಾಕು ಸರೀನಿ ಇನ್ನ, ಸಾರು ಬಿಸಿ ಮಾಡಬೇಕು" ಅಂತ ನನ್ನ ಅತ್ತ ನೂಕಿ ಮೇಲೆದ್ದಳು, ಫ್ರಿಡ್ಜು ಬಾಗಿಲು ತೆಗೆದು ಅವಳು ಒಂದೊಂದೆ ಪಾತ್ರೆ ಹೊರಗೆ ತಗೀತಿರಬೇಕಾದ್ರೆ, ನಾನೂ ಒಂದು ಪಾತ್ರೆ ಎತ್ತಿಕೊಂಡು ಅವಳ ಕೆನ್ನೆಗೆ ತಾಕಿಸಿದೆ, "ರೀ, ತಂಪು" ಅಂತ ಓಡಿದಳು. ಗ್ಯಾಸಿನ ಕಟ್ಟೆ ಮೇಲೆ ನಾ ಹತ್ತಿ ಕೂತು, ನೆನೆಸಿದ ಬಟಾಣಿ ಒಂದೊಂದೇ ತಿನ್ನುತ್ತ ಮಾತಾಡುತ್ತಿದ್ದೆ, "ನಾಳೆ ಏನು ಪಲ್ಯ ಏನು ಮಾಡೊದು" ಅಂತ ಅದನ್ನು ಕಸಿದುಕೊಂಡಳು, ಉಳಿದ ನಾಲ್ಕು ಕಾಳು "ಕ್ಯಾಚ್" ಅನ್ನುತ್ತ ಒಂದೊಂದೇ ಅವಳ ಬಾಯಿಗೆಸೆದೆ, ಅದನ್ನೇ ಮೆಲ್ಲುತ್ತ "ಮತ್ತೇ ಏನ ನಡೀತಿದೆ ಆಫೀಸಲ್ಲಿ ಬಹಳ ಬೀಜೀ ಆಗೀದೀರಾ" ಅಂದ್ಲು. "ಅದಾ ಪ್ರೊಜೆಕ್ಟು ಮುಗೀತಿದೆ, ಕಂಪನೀ ಮಾರಾಟ ಮಾಡ್ತಿದಾರೆ, ಮೀಟಿಂಗ ಮೇಲೇ ಮೀಟಿಂಗು ಅದೇ ಟೆನ್ಷನ್ ಈಗ" ಅಂದೆ. "ಅದೆಲ್ಲ ಇದ್ದದ್ದೇ ಬಿಡ್ರೀ, ಹೊಸಾ ಹುಡುಗೀ ಯಾವ್ದೂ ಜಾಯಿನ(ಸೇರಿಕೊ) ಆಗಿಲ್ವ" ಅಂದ್ಲು. "ಇರೊ ಹುಡುಗೀರದು ಮದುವೆ ಆಗ್ತಿದೆ, ಅದ್ರೂ ಹೊಸಾ ರೆಸೆಪ್ಷನಿಸ್ಟ ಬಂದೀದಾಳೆ ಗೊತ್ತ" ಅಂದೆ "ಹಾಗಾದ್ರೆ, ನೀವು ಆಫೀಸು ಒಳಗೇ ಹೋಗ್ತಾನೇ ಇಲ್ಲ ಅನಿಸಿತ್ತೆ ಅಲ್ಲೇ ಬಾಗಿಲಲ್ಲೇ ಅವಳ ನೋಡ್ತಾ ನಿಂತ್ಕೋತಿರಬೇಕು" ಅಂದ್ಲು "ಹಾಗೇನಿಲ್ಲಪ್ಪ, ಏನು ಲೇಟರ ಬರೋದಿಲ್ಲ ಅಂದ್ರೂ ಆಗಾಗ ಹೋಗಿ ಸ್ವಲ್ಪ ಲೇಟರು ಬಂದಿದೇನಾ ಅಂತ ವಿಚಾರಿಸಿಕೊಂಡು ಬರ್ತೀನಿ ಅಷ್ಟೇ" ಅಂದೆ. "ಅಷ್ಟೇ ಅಂತೆ ಅಷ್ಟೇ" ಅಂತ ಕಾದ ಸೌಟಿನಿಂದ ತಿವಿದಳು, ಚೀರಿದೆ. "ಅಂತೂ ನಿಗಾ ಇಟ್ಟಿದೀರಾ ಅವಳ ಮೇಲೆ" ಅಂದ್ಲು, ಬಿಸಿಗೆ ಕೆಂಪಗಾಗಿದ್ದ, ಕೈ ಸವರಿಕೊಳ್ಳುತ್ತ "ಅವಳೆಲ್ಲಿ ಹೋಗ್ತಾಳೆ ಅಲ್ಲೇ ಇರ್ತಾಳೆ" ಅಂದೆ. "ಅವಳು ಅಲ್ಲೇ ಇರಲಿ, ಇಲ್ಲಾಂದ್ರೆ ಇಲ್ಲಿ ನಾನಿರಲ್ಲ" ಅಂತಂದಳು, ಜೋರಾಗಿ ನಗುತ್ತ, ಆದ ಘಟನೆಗಳು  ಮತ್ತೆ ನೆನಪಿಗೆ ಬಂದು ನಾನೂ ನಗತೊಡಗಿದೆ. ಊಟ ಮಾಡಿ ಮಲಗೊ ಹೊತ್ತಿಗೆ ಲೇಟಾಗಿತ್ತು, "ನಾಳೆ ಲೇಟಾಗಿ ಹೋಗ್ತೀನಿ" ಅಂದೆ.. "ಯಾಕೆ?"... "ಯಾರನ್ನೊ ಪಿಕ್‌ಅಪ್ ಮಾಡಬೇಕು" ಅಂದೆ... ಅವಳು ನಕ್ಕಳು, ನೆಪ ಅಂತ ಗೊತ್ತಾಗಿರಬೇಕು. "ನಿಮ್ಮ ಮ್ಯಾನೇಜರಿಗೆ ಫೋನ ಮಾಡಿ ಹೇಳ್ತೀನಿ" ಅಂತ ಹೆದರಿಸ್ತಾ ಇದ್ಲು, ಹೀಗೆ ಬಿಟ್ರೆ ಅವಳು ಮಾತಾಡ್ತಾನೇ ಇರ್ತಾಳೆ ಅಂತ, ಬರಸೆಳೆದು ಮುಸುಗೆಳೆದುಕೊಂಡೆ.

ಹೀಗೆ ಮತ್ತೆ ಸಿಕ್ತೀನಿ, ಅವಳನ್ನು ಹುಡುಕಾಡುತ್ತ...

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...